ಈ ಲೇಖನದ ವಿಷಯಾನುಕ್ರಮಣಿಕೆ


## ಧರ್ಮೋದಕ 2

ಧರ್ಮೋದಕ ಎಂಬ ಶಬ್ದದ ಅರ್ಥ 3

ಧರ್ಮೋದಕ ಎಂದರೆ 106 ಬಾರಿ ತರ್ಪಣಗಳು 4

ಯಾಕಿಷ್ಟು ಬಾರಿ ನೀಡಬೇಕು, ಕಾರಣವೇನು? 8

ಪ್ರೇತಶಿಲೆಯ ಕಾರ್ಯವನ್ನು ಮನೆಯಲ್ಲಿ ಮಾಡಬಾರದು 9

ಆಪತ್ಕಾಲದಲ್ಲಿ ಧರ್ಮೋದಕ ನೀಡುವ ಕ್ರಮ 10

ಸಂಗ್ರಹ 15

ಹರಿಸ್ಮರಣೆ ಇಲ್ಲದೇ ಕರ್ಮ ಮಾಡಬೇಡಿ 16

## ಮನೆಯ ಹೊರಗೆ ಧರ್ಮೋದಕದ ಪ್ರಕ್ರಿಯೆ 17

ಋಗ್ವೇದಕ್ಕೂ ಯಜುರ್ವೇದಕ್ಕೂ ಇರುವ ವ್ಯತ್ಯಾಸ 20

ಋಗ್ವೇದ ಮತ್ತು ಸಾಮವೇದದ ಕ್ರಮ 20

ಯಜುರ್ವೇದದ ಕ್ರಮ 28

ವಿಸರ್ಜನೆ 36

ಮರೆಯಬಾರದ ಮಾತು 38

## ಧರ್ಮೋದಕ

ಶಾರ್ವರೀಸಂವತ್ಸರದ (2020 ನೇ ಇಸವಿ) ಆರಂಭದಿಂದಲೇ  ದೇಶದಲ್ಲಿ COVID ನ ಕಾರಣದಿಂದ ಲಾಕ್ ಡೌನ್ ಗಳು ಮೇಲಿಂದ ಮೇಲೆ ಜಾರಿಯಾಗುತ್ತಿರುವದರಿಂದ, ಯಾವುದೇ ರೀತಿಯ ಸಮಾರಂಭಗಳನ್ನೂ ಮಾಡದ ಪರಿಸ್ಥಿತಿ ಉಂಟಾಗಿದೆ.

ಕಡೆಗೆ ಅಂತ್ಯಸಂಸ್ಕಾರ, ಅಸ್ಥಿವಿಸರ್ಜನೆ, ಧರ್ಮೋದಕ ಮುಂತಾದ ಅತ್ಯವಶ್ಯಕರ್ಮಗಳಿಗೂ ಸಂಚಕಾರ ಉಂಟಾಗಿದೆ.

ಇಂತಹ ಸಂದರ್ಭದಲ್ಲಿ ನಮ್ಮ ಪ್ರೀತಿಪಾತ್ರರಾದ ಬಾಂಧವರು ಮೃತರಾದಾಗ ನಾವು ಮಾಡಲೇಬೇಕಾದ ಧರ್ಮೋದಕ ಎಂಬ ಕ್ರಿಯೆಯನ್ನು ಹೇಗೆ ಎಲ್ಲಿ ಮಾಡಬಹುದು ಎನ್ನುವದರ ಕುರಿತು ಹರಿಗುರುಗಳ ಪಾದಸ್ಮರಣೆ ಮಾಡಿ ಈಗ ತಿಳಿಯೋಣ.

## ಧರ್ಮೋದಕ ಎಂಬ ಶಬ್ದದ ಅರ್ಥ

ಸ್ತ್ರೀಯಾಗಲೀ ಪುರುಷನಾಗಲೀ ಮರಣ ಹೊಂದಿದ ಹತ್ತನೆಯ ದಿವಸ ಮಗ ಮತ್ತು ಎಲ್ಲ ಬಾಂಧವರು ಮಾಡಬೇಕಾದ ಒಂದು ಕ್ರಿಯೆ ಧರ್ಮೋದಕ.

ವಸ್ತುಸ್ಥಿತಿಯಲ್ಲಿ ಧರ್ಮೋದಕ ಎನ್ನುವದು ನಮ್ಮ ಕರ್ಣಾಟಕ ಮುಂತಾದೆಡೆ ಹೆಚ್ಚು ಬಳಕೆಯಾಗುವ ಶಬ್ದ.

ಶಾಸ್ತ್ರಗಳಲ್ಲಿ ಈ ಕ್ರಿಯೆಯನ್ನು "ಉದಕಕ್ರಿಯೆ, ಉದಕಕರ್ಮ, ಸಲಿಲಕರ್ಮ, ಸಲಿಲಕ್ರಿಯೆ" ಎಂದು ಕೇವಲ **ಉದಕ** ಎಂಬ ಶಬ್ದದಿಂದ ಕರೆಯಲಾಗಿದೆ. ಧರ್ಮೋದಕ ಎನ್ನುವ ಶಬ್ದ ಒಂದೆರಡು ಕಡೆ ಮಾತ್ರ ಬಳಕೆಯಾಗಿದೆ.

ಈ ಧರ್ಮೋದಕ ಎನ್ನುವ ಶಬ್ದಕ್ಕೂ ಮಹತ್ತ್ವವಿದೆ. ಧರ್ಮ ಎಂದರೆ ಪುಣ್ಯ.
**ಮೃತ ವ್ಯಕ್ತಿಗೆ ಹತ್ತನೆಯ ದಿವಸ ನಾವು ಮಾಡಿದ ಯಾವುದಾದರೂ ಪುಣ್ಯದೊಂದಿಗೆ ನೀರನ್ನು ನೀಡುವದರಿಂದ ಧರ್ಮೋದಕ ಎಂದು ಈ ಕ್ರಿಯೆಗೆ ಹೆಸರು.**

## ಧರ್ಮೋದಕ ಎಂದರೆ 106 ಬಾರಿ ತರ್ಪಣಗಳು

ಇತ್ತೀಚಿನ ವರ್ಷಗಳಲ್ಲಿ ಈ ಧರ್ಮೋದಕದ ಪ್ರಕ್ರಿಯೆ ಸರಿಯಾಗಿ ಎಲ್ಲಿಯೂ ನಡೆಯುತ್ತಿಲ್ಲ.

ಹತ್ತನೆಯ ದಿವಸದ ಪಿಂಡಪ್ರದಾನದ ಕಾರ್ಯದಿಂದ ಆರಂಭಿಸಿ ಕಾಕಪಿಂಡದವರೆಗಿನ ಎಲ್ಲ ಕಾರ್ಯಗಳನ್ನು ಕರ್ತೃಗಳು ಮುಗಿಸಿದ ನಂತರ ನಡೆಯುವ ಕ್ರಿಯೆ ಧರ್ಮೋದಕ.

ಆ ನಂತರ ಕರ್ತೃವು ತಾನು ಪ್ರತಿನಿತ್ಯ ಕಾರ್ಯ ಮಾಡಬೇಕಾದರೆ ಕೊರಳಿಗೆ ಧರಿಸುತ್ತಿದ್ದ ಬಟ್ಟೆ (ವಾಸಸ್ ಅಥವಾ ವಾಸೋ) ಅದನ್ನು ತೆಗೆದು ಬಂದಿರುವ ಬಂಧುಗಳಲ್ಲಿ ಯಾರು ವಯಸ್ಸು ಮತ್ತು ಸಂಬಂಧಗಳಿಂದ ಹಿರಿಯರೋ ಅವರಿಗೆ ಅದನ್ನು ನೀಡಬೇಕು.

ಧರ್ಮೋದಕ ನೀಡುವವರು ಸ್ನಾನ, ಸಂಧ್ಯಾವಂದನಾದಿಗಳನ್ನು ಮುಗಿಸಿರಬೇಕು. ಅಶೌಚ ಇಲ್ಲದವರು ದೇವರ ಪೂಜೆಯನ್ನೂ ಮುಗಿಸಿ ಬಂದಿರಬೇಕು. ಧರ್ಮೋದಕ ನೀಡಿದ ನಂತರ ದೇವರ ಪೂಜೆಯನ್ನು ಮಾಡುವಂತಿಲ್ಲ.

ಕ್ರಿಯೆ ನಡೆಯುವ ಸ್ಥಳಕ್ಕೆ ಬಂದು ಅಲ್ಲಿಯೂ ಸ್ನಾನ ಮಾಡಿ, ಮೈಮೇಲೆ ಗೋಪೀಚಂದನ ಮುದ್ರೆಗಳನ್ನು ಧರಿಸಿ, ಪವಿತ್ರ ಧಾರಣೆ ಮಾಡಿ, ಒದ್ದೆ ಬಟ್ಟೆಯಿಂದಲೇ ಧರ್ಮೋದಕವನ್ನು ನೀಡಬೇಕು.

ಕರ್ತೃವು ನೀಡಿದ ಬಟ್ಟೆಯನ್ನು ಮೂರು ಪದರ ಮಾಡಿ ಮಡಿಸಿಕೊಂಡು ಕೈಯಲ್ಲಿಟ್ಟುಕೊಳ್ಳಬೇಕು. ತಿಲತರ್ಪಣ ನೀಡುವಂತೆಯೇ ಧರ್ಮೋದಕವನ್ನು ನೀಡುವದು.

ತರ್ಪಣವನ್ನು ನೀಡುವ ತುದಿಯಲ್ಲಿ  (ಬಲಗೈ ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯದಿಂದ ನೀಡುವದು ಪಿತೃತೀರ್ಥ) ಬಟ್ಟೆ ಎಳ್ಳು ಮತ್ತು ದಕ್ಷಿಣೆಯನ್ನಿಟ್ಟುಕೊಂಡು **106 ಬಾರಿ ಬೇರೆ ಬೇರೆ ವಾಕ್ಯಗಳಿಂದ ಪಿತೃಶಿಲೆಯ ಮೇಲೆ ತರ್ಪಣವನ್ನು ನೀಡಬೇಕು.**

**ಇದರಲ್ಲಿ 30 ಬಾರಿ ಕೇವಲ ಬಟ್ಟೆಯಿಂದ, 75 ಬಾರಿ ಕೇವಲ ಎಳ್ಳಿನಿಂದ, ಒಂದು ಬಾರಿ ದಕ್ಷಿಣೆಯೊಂದಿಗೆ.**

**ಇದಲ್ಲದೇ ಧರ್ಮೋದಕ ನೀಡಲು ಸ್ನಾನ ಮಾಡುವಾಗಲೇ ಕುಲಾಚಾರದಂತೆ 3 ಅಥವಾ ಹತ್ತು ಬಾರಿ ಬೊಗಸೆಯಲ್ಲಿ ಜಲಾಂಜಲಿಯನ್ನು ನೀಡುವದನ್ನೂ ಶಾಸ್ತ್ರ ವಿಧಿಸುತ್ತದೆ.**

ಇವತ್ತು ಈ ಶಾಸ್ತ್ರೀಯ ಪ್ರಕ್ರಿಯೆಗಳೆಲ್ಲ ಕಳೆದುಹೋಗಿವೆ.

ಪುರೋಹಿತರೂ ಒಂದೇ ಬಾರಿ ನೀಡಿಸುತ್ತಾರೆ. ನೀಡುವವರಿಗೂ ತಿಳಿದಿರುವದಿಲ್ಲ. ಧರ್ಮಕಾರ್ಯಗಳೆಲ್ಲ ಹೀಗೇ ನಶಿಸಿ ಹೋಗುತ್ತಿರುವದು ಇಂದಿನ ಕಾಲದ ದುರಂತ.

ಆ ನಂತರ ಜ್ಞಾತಿಗಳು ಒಂದು ವೀಳ್ಯದೆಲೆ, ಒಂದು ಅಡಿಕೆ ಮತ್ತು ದಕ್ಷಿಣೆಯನ್ನು ಮೊದಲೇ ತಂದಿರಬೇಕು. ಅದನ್ನು ಪ್ರೇತಶಿಲೆಯ ಮುಂದಿಟ್ಟು ಮೃತವ್ಯಕ್ತಿಯ ಗೋತ್ರ, ನಾಮ ಮತ್ತು ಸಂಬಂಧಗಳನ್ನು ಹೇಳಿ ದಕ್ಷಿಣೆಯೊಂದಿಗೆ ಜಲತರ್ಪಣವನ್ನು ನೀಡಬೇಕು.

ಇದನ್ನು ನೀಡುವ ಸಮಯದಲ್ಲಿಯೇ ಬಾಂಧವರು ತಾವು ಮಾಡಿದ ಪುಣ್ಯಕರ್ಮವೊಂದನ್ನು ಚಿಂತಿಸಿ ಅದರ ಫಲ ಮೃತವ್ಯಕ್ತಿಗೆ ತಲುಪಲಿ ಎಂದು

ಕಡೆಯ ತರ್ಪಣವನ್ನು ನೀಡತಕ್ಕದ್ದು. ಇದು 106ನೆಯ ತರ್ಪಣ.

30 ಬಾರಿ ಬಟ್ಟೆಯೊಂದಿಗೆ ಜಲತರ್ಪಣ, 75 ಬಾರಿ ತಿಳ್ತರ್ಪಣ ನೀಡಬೇಕು. ಕಡೆಯಲ್ಲಿ ಪುಣ್ಯ ನೀಡುವ ತರ್ಪಣ. ಮೃತವ್ಯಕ್ತಿಗೆ ಇಷ್ಟು ಬಾರಿ ನೀರಿನಿಂದ ತರ್ಪಣ ನೀಡುವ ಕ್ರಿಯೆ ಇರುವದರಿಂದಲೇ ಆದ್ದರಿಂದಲೇ ಇದನ್ನು ಉದಕಕ್ರಿಯೆ, ಸಲಿಲಕ್ರಿಯೆ ಎನ್ನುತ್ತಾರೆ.

## ಯಾಕಿಷ್ಟು ಬಾರಿ ನೀಡಬೇಕು, ಕಾರಣವೇನು?

ದಹನವಾದ ಮೊದಲನೆಯ ದಿವಸದಿಂದಲೇ ಕರ್ತೃವು ನೀಡುವ ಪಿಂಡಪ್ರದಾನದಿಂದ ಮೃತವ್ಯಕ್ತಿಗೆ ಶರೀರ ನಿರ್ಮಾಣವಾಗಲು ಆರಂಭವಾಗುತ್ತದೆ. ಇದೇ ಶರೀರದಿಂದ ಆ ಜೀವ ಯಮಲೋಕಕ್ಕೆ ಪ್ರಯಾಣ ಬೆಳೆಸುತ್ತದೆ. ಇದನ್ನು ಯಾತನಾಮಯಶರೀರ ಎನ್ನುತ್ತಾರೆ.

ಈ ಶರೀರದ ನಿರ್ಮಾಣ ಹತ್ತನೆಯ ದಿವಸದ ಪಿಂಡಪ್ರದಾನಕ್ಕೆ ಮುಗಿಯುತ್ತದೆ. ಆ ಕ್ಷಣದಿಂದ ಅದಕ್ಕೆ ಅಪಾರವಾದ ನೀರಡಿಕೆ ಮತ್ತು ಹಸಿವು ಆರಂಭವಾಗುತ್ತದೆ.

ಹೀಗಾಗಿ ಎಲ್ಲ ಬಾಂಧವರೂ ಕರ್ತೃ ಧರಿಸಿದ ಬಟ್ಟೆಯೊಂದಿಗೆ ಪ್ರೇತಶಿಲೆಯ ಮೇಲೆ 30 ಬಾರಿ ಕೇವಲ ನೀರಿನಿಂದಲೂ, 75 ಬಾರಿ ಎಳ್ಳಿನೊಂದಿಗೆಯೂ ತರ್ಪಣವನ್ನು ನೀಡಿದಾಗ ಅದಕ್ಕೆ ತೃಪ್ತಿಯಾಗುತ್ತದೆ.

ಆದ್ದರಿಂದಲೇ ಧರ್ಮೋದಕಕ್ಕೆ ಅಷ್ಟು ಮಹತ್ತ್ವ. ಆದರೇನು ಮಾಡುವದು ಎಲ್ಲವೂ ಲುಪ್ತವಾಗುತ್ತಿದೆ.

## ಪ್ರೇತಶಿಲೆಯ ಕಾರ್ಯವನ್ನು ಮನೆಯಲ್ಲಿ ಮಾಡಬಾರದು

ಯಾವುದೇ ಪ್ರೇತಕಾರ್ಯವನ್ನು ಮನೆಯಲ್ಲಿ ಮಾಡತಕ್ಕದ್ದಲ್ಲ, ಶ್ಮಶಾನದಲ್ಲಿ ಅಥವಾ ನದೀ, ಸರೋವರಗಳ ಸಮೀಪ ಅಥವಾ ಜನಸಂಚಾರವಿಲ್ಲದ ಪ್ರದೇಶದಲ್ಲಿ ಮಾಡತಕ್ಕದ್ದು ಎಂದು ಶಾಸ್ತ್ರ ವಿಧಾನ ಮಾಡುತ್ತದೆ.

ಈ ರೀತಿಯಾಗಿ ಬಟ್ಟೆ ಮತ್ತು ಪ್ರೇತಶಿಲೆಗಳ ಜೊತೆಯಲ್ಲಿ ಮಾಡುವ ಕಾರ್ಯವೇನಿದೆ ಅದನ್ನು ಸರ್ವಥಾ ಮನೆಯಲ್ಲಿ, ಮನೆಯ ಮಹಡಿಯ ಮೇಲೆ, ಅಂಗಳದಲ್ಲಿ ಮಾಡತಕ್ಕದ್ದಲ್ಲ.

ಪ್ರತಿಯೊಂದು ಕ್ರಿಯೆಗೂ ದೇಶ ಕಾಲಗಳಿರುತ್ತವೆ. ಆಯಾ ದೇಶ ಆಯಾ ಕಾಲಗಳಲ್ಲಿಯೇ ಅವನ್ನು ಮಾಡಬೇಕೇ ಹೊರತು ಬೇರೆಡೆಯಲ್ಲಿ ಮಾಡತಕ್ಕದ್ದಲ್ಲ.

ದೇವಸ್ಥಾನದಲ್ಲಿ ಶ್ರಾದ್ಧ, ಅಂತ್ಯಸಂಸ್ಕಾರ ಮಾಡಬಾರದು. ಶ್ಮಶಾನದಲ್ಲಿ ಮದುವೆ ಮುಂಜಿ ಮಾಡಬಾರದು ಎನ್ನುವ ಪ್ರಾಥಮಿಕ ವಿಷಯ ನಮಗರಿವಿರಬೇಕು.

## ಆಪತ್ಕಾಲದಲ್ಲಿ ಧರ್ಮೋದಕ ನೀಡುವ ಕ್ರಮ

ಇನ್ನು ರಾಷ್ಟ್ರಕ್ಷೋಭ, ಯುದ್ಧ ಮುಂತಾದ ಸಂದರ್ಭಗಳಲ್ಲಿ ಕೆಲವು ಕರ್ಮಗಳಿಗೆ ಶಾಸ್ತ್ರ ವಿನಾಯತಿ ನೀಡುತ್ತದೆ.

ಈಗ ಕೋವಿಡ್ 19, ಕೋರೊನಾ ವ್ಯಾಧಿಯ ನಿಮಿತ್ತದಿಂದ ಎಲ್ಲೆಡೆಯೂ Lockdown ಸಮಸ್ಯೆ ಎದುರಾಗಿದೆ. ಹೊರಗೆ ಹೋಗುವಂತಿಲ್ಲ. ಮನೆಯಲ್ಲಿಯೇ ಇರಬೇಕು. ಅಂತ್ಯಸಂಸ್ಕಾರ ಎಂದರೆ ದಹನ ಮಾತ್ರ. ಅದರಲ್ಲಿಯೂ 5 ಜನ ಮಾತ್ರ ಭಾಗವಹಿಸಬೇಕು. ಮುಂದಿನ ಕ್ರಿಯೆಗಳಿಗೂ ಓಡಾಡುವಂತಿಲ್ಲ. ಇತ್ಯಾದಿ ನಿಯಮಗಳನ್ನು ಸರಕಾರ ಹಾಕಿದೆ.

ಹೀಗಾಗಿ ಅತ್ಯಂತ ಆಪ್ತರಾದ ಬಾಂಧವರು ಮೃತರಾದರೂ ಅವರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಮತ್ತು ಮಕ್ಕಳಿಗೇ ಎಲ್ಲ ಕ್ರಿಯೆಗಳನ್ನು ಮಾಡಲಾಗುತ್ತಿಲ್ಲ.

ಬಾಂಧವರಾಗಿ, ಅತ್ಯಂತ ಆಪ್ತರಾದ ನಮಗೆ ಮಹೋಪಕಾರ ಮಾಡಿದ ಅತ್ಯಂತ

ಪ್ರೀತಿಪಾತ್ರರಾದ ಬಾಂಧವರಿಗೆ ಧರ್ಮೋದಕವನ್ನು ನೀಡಲಾಗದೇ ಇರುವ ಪರಿಸ್ಥಿತಿ ಅತ್ಯಂತ ಯಾತನಾದಾಯಕ.

ಅನೇಕ ಜನ ಸಜ್ಜನರು ಮೇಲಿಂದ ಮೇಲೆ  ಇದಕ್ಕೆ ಪರಿಹಾರವನ್ನು ಕೇಳುತ್ತಿದ್ದರಿಂದ ನನಗಿರುವ ಶಾಸ್ತ್ರದ ಪುಟ್ಟ ತಿಳುವಳಿಕೆಯ ಪರಿಧಿಯಲ್ಲಿ ಅನೇಕ ಗ್ರಂಥಗಳನ್ನು ಅವಲೋಕಿಸಿ ಈ ರೀತಿ ಮಾಡಬಹುದು ಎಂದು ಸೂಚಿಸುತ್ತಿದ್ದೇನೆ.

ಹಿಂದಿನ ಕಾಲದಲ್ಲಿ ದೂರದೂರದಲ್ಲಿದ್ದ ಬಂಧುಗಳು ಮೃತರಾದಾಗ ಎಲ್ಲರಿಗೂ ಅಲ್ಲಿಗೇ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ  ಅವರು ತಾವಿದ್ದ ಊರಿನಲ್ಲಿಯೇ ಊರ ಹೊರಗೆ ಹೋಗಿ ಧರ್ಮೋದಕವನ್ನು ನೀಡುವ ಪ್ರಕ್ರಿಯೆಯನ್ನೂ ಶಾಸ್ತ್ರ ತಿಳಿಸುತ್ತದೆ.

**ಕರ್ತೃವು ಕ್ರಿಯೆ ಮಾಡುತ್ತಿರುವ ಸ್ಥಳದಲ್ಲಿಯೇ ಧರ್ಮೋದಕ ನೀಡುವಾಗ ವಾಸೋದಕವಿದೆ. ಆದರೆ ಕರ್ತೃವಿಗಿಂತ ದೂರದಲ್ಲಿರು ಬಂಧುಗಳು ಧರ್ಮೋದಕ ನೀಡುವಾಗ ಬೇರೆಯ ಬಟ್ಟೆಯನ್ನು ಬಳಸಿ ನೀಡುವಂತಿಲ್ಲ ಎಂದು ಶಾಸ್ತ್ರ ಸ್ಪಷ್ಟವಾಗಿ ತಿಳಿಸುತ್ತದೆ.**

ಪ್ರಧಾನ ಧರ್ಮೋದಕದಲ್ಲಿ ಒಟ್ಟು ಮೂರು ಪ್ರಕ್ರಿಯೆಗಳು.

1. 30 ಬಾರಿ ವಾಸೋದಕಪ್ರದಾನ
2. 75 ಬಾರಿ ತಿಲೋದಕಪ್ರದಾನ
3. ಪುಣ್ಯ ನೀಡುವ ಧರ್ಮೋದಕಪ್ರದಾನ

ಇದರಲ್ಲಿ ಮೊದಲ ಎರಡು ಪ್ರಕ್ರಿಯೆಗಳನ್ನು ಸಾಮಾನ್ಯಕಾಲದಲ್ಲಿಯೇ ಯಾರೂ ಮಾಡಿಸುತ್ತಿಲ್ಲ.

ಈ ಮೊದಲ ಎರಡು ಪ್ರಕ್ರಿಯೆಗಳಿಗೆ ಕರ್ತೃ ಧರಿಸಿರುವ ವಾಸಸ್, ಮತ್ತು ಪ್ರೇತಶಿಲೆ ಅತ್ಯಾವಶ್ಯಕ. ಅವಿಲ್ಲದೆ ಕ್ರಿಯೆಯೇ ಹುಟ್ಟುವದಿಲ್ಲ.

ಕ್ರಿಯೆ ನಡೆಯುವ ಸ್ಥಳದಿಂದ ದೂರದಲ್ಲಿರುವ ಬಂಧುಗಳು ಮೊದಲ ಮೂವತ್ತು ತರ್ಪಣವನ್ನು ನೀಡುವಂತಿಲ್ಲ.

ಆದರೆ ಒಂದು ಪುಟ್ಟ ಶಿಲೆಯಲ್ಲಿ ಮೃತ ಜೀವವನ್ನು ಆವಾಹಿಸಿ 75 ಬಾರಿ ತಿಲತರ್ಪಣವನ್ನು ನೀಡಬೇಕು.

ಆ ನಂತರ ಧರ್ಮೋದಕವನ್ನು ನೀಡಿ ಆ ಶಿಲೆಯನ್ನು ವಿಸರ್ಜಿಸಬೇಕು.

ಹೀಗೆ ದೂರದೂರಿನ ಬಂಧುಗಳಿಗೆ ಹೇಳಿದ ಕ್ರಮವನ್ನೇ ನಾವೀಗ ಅನುಸರಿಸಬೇಕು.

ಆದರೆ ಅದರಲ್ಲಿಯೂ ಸಮಸ್ಯೆಯಿದೆ. ಕ್ರಿಯೆ ನಡೆಯುವ ಸ್ಥಳಕ್ಕೆ ಹೋಗಲಾಗದ ಬಂಧುಗಳು ತಮ್ಮ ಗ್ರಾಮದ ಹೊರಗೆ ಬಂದು ಧರ್ಮೋದಕ ನೀಡುತ್ತಿದ್ದರು. ಹೀಗಾಗಿ ಶಿಲೆಯಲ್ಲಿ ಪ್ರೇತದ ಆವಾಹನೆ ಸೂಕ್ತವಾಗುತ್ತಿತ್ತು.

ನಾವು ಮಹಾಭಾರತಾದಿ ಗ್ರಂಥಗಳನ್ನು ಅವಲೋಕಿಸಿದಾಗ ಎಲ್ಲರೂ ಊರ ಹೊರಗೆ ಬಂದೇ ಉದಕಕ್ರಿಯೆಯನ್ನು ಮಾಡಿದ ಉಲ್ಲೇಖ ದೊರೆಯುತ್ತದೆ.

ಈಗ ಪಟ್ಟಣಗಳಲ್ಲಿ ವಾಸ ಮಾಡುವವರಿಗೆ ನದೀತೀರ ಮುಂತಾದ ಪ್ರದೇಶಗಳು ದೊರೆಯುವದೂ ಇಲ್ಲ. ದೊರೆತರೂ ಹೋಗುವಂತಿಲ್ಲ.

ಆದರೆ, ಈ ಕ್ರಿಯಾಕರ್ಮಗಳು ನಡೆಯಲಿಕ್ಕಾಗಿಯೇ ಪಟ್ಟಣಗಳಲ್ಲಿ ಪ್ರತ್ಯೇಕ ಸ್ಥಳಗಳಿರುತ್ತವೆ. ಉದಾಹರಣೆಗೆ ಬೆಂಗಳೂರಿನಲ್ಲಿ ಕರ್ಮಾಂತರಭವನ, ಹಯಗ್ರೀವಧಾಮ ಇತ್ಯಾದಿಗಳು. ಮೈಸೂರಿನಲ್ಲಿ ಶಾಂತಿಧಾಮ ಇತ್ಯಾದಿಗಳು.

ಅಲ್ಲಿಗೆ ಹೋಗಿ ಯಾರಿಗೆ ಧರ್ಮೋದಕ ನೀಡಲು ಸಾಧ್ಯವೋ (ಸತ್ತವರ ಕ್ರಿಯೆ ಅಲ್ಲಿ ನಡೆಯುತ್ತಿರಬೇಕಾಗಿಲ್ಲ, ನಿಮ್ಮ ಹತ್ತಿರದ ಯಾವುದೇ ಅಪರಕರ್ಮಗಳು ನಡೆಯುವ ಸ್ಥಳಕ್ಕೆ ಹೋಗಲು ಸಾಧ್ಯವಾದರೆ) ಪ್ರೇತಶಿಲೆಯ ಆವಾಹನೆಯ ಪ್ರಕ್ರಿಯೆ ಮತ್ತು 76 ತರ್ಪಣಗಳ ಕ್ರಮವನ್ನು ನೀವು ಅನುಸರಿಸಬಹುದು.

ಅದೂ ಸಾಧ್ಯವಿಲ್ಲದವರು ಮನೆಯಿಂದ ಹೊರಗೆ ಅಂಗಳದಲ್ಲಿ ಅಥವಾ ಹಿತ್ತಲಿನಲ್ಲಿ ಪ್ರೇತಶಿಲೆಯ ಆವಾಹನೆ ಇಲ್ಲದೇ ಕೇವಲ 75 ಬಾರಿ ತಿಲೋದಕ ಮತ್ತು 1 ಬಾರಿ ಧರ್ಮೋದಕವನ್ನು ನೀಡತಕ್ಕದ್ದು.

## ಸಂಗ್ರಹ

ಸ್ಪಷ್ಟವಾಗಲು ಮತ್ತೊಮ್ಮೆ ತಿಳಿಸುತ್ತೇನೆ —

1. ಕರ್ತೃವು ಕ್ರಿಯೆ ಮಾಡುವ ಸ್ಥಳದಲ್ಲಿಯೇ ಧರ್ಮೋದಕ ನೀಡುವಾಗ ಪ್ರೇತಶಿಲೆಯ ಮೇಲೆ 30 ಬಾರಿ ವಾಸೋದಕ, 75 ಬಾರಿ ತಿಲೋದಕ 1 ಬಾರಿ ಧರ್ಮೋದಕ. ಒಟ್ಟು 106 ತರ್ಪಣಗಳು.

2. ಕ್ರಿಯೆ ನಡೆಯುವ ಸ್ಥಳಕ್ಕೆ ಹೋಗಲು ಸಾಧ್ಯವಿಲ್ಲದಿದ್ದಾಗ ಯಾವುದೇ ನದೀ ಸರೋವರಗಳ ತೀರದಲ್ಲಿ ಅಥವಾ ಅಂತ್ಯಸಂಸ್ಕಾರ ಕರ್ಮಗಳು ನಡೆಯುವ ಸ್ಥಳಗಳಿಗೆ ಹೋಗಿ **ಅಲ್ಲಿ ಬಾಂಧವರೇ ಒಂದು ಶಿಲೆಯಲ್ಲಿ ಮೃತ ಜೀವವನ್ನು ಆವಾಹಿಸಿ** 75 ಬಾರಿ ತಿಲತರ್ಪಣ ಮತ್ತು 1 ಬಾರಿ ಧರ್ಮೋದಕ.

3. ರಾಷ್ಟ್ರಕ್ಷೋಭ ಮುಂತಾದ ಪರಿಸ್ಥಿತಿಯಲ್ಲಿ ಮನೆ ಬಿಟ್ಟು ಹೊರಬರಲು ಸಾಧ್ಯವೇ ಇಲ್ಲದಿದ್ದಾಗ ಮನೆಯ ಹೊರಗೆ (ಅಂಗಳ ಅಥವಾ ಹಿತ್ತಲು, ಅಥವಾ ಇವತ್ತಿನ

ಅಪಾರ್ಟ್ಮೆಂಟುಗಳ ಬಾಲ್ಕನಿ) ಇವುಗಳಲ್ಲಿ ಕುಳಿತು 1 ಬಾರಿ ಧರ್ಮೋದಕವನ್ನು ನೀಡಬೇಕು. **ಮೃತಜೀವದ ಆವಾಹನೆ ವಿಸರ್ಜನೆಗಳನ್ನು ಸರ್ವಥಾ ಸರ್ವಥಾ ಮಾಡತಕ್ಕದ್ದಲ್ಲ.**

## ಹರಿಸ್ಮರಣೆ ಇಲ್ಲದೇ ಕರ್ಮ ಮಾಡಬೇಡಿ

ಕೊರೋನಾದಿಂದ ಉಂಟಾಗಿರುವ ಈ ರಾಷ್ಟ್ರಕ್ಷೋಭದ ಸಂದರ್ಭದಲ್ಲಿ ಸರಿಯಾಗಿ ಅಂತ್ಯಸಂಸ್ಕಾರಗಳು ನಡೆಯುತ್ತಿಲ್ಲ. ಅದರಿಂದ ಮೃತಜೀವಗಳಿಗೆ ತುಂಬ ತೊಂದರೆಯುಂಟಾಗುತ್ತದೆ. ಕನಿಷ್ಠ ಪಕ್ಷ ಧರ್ಮೋದಕವನ್ನಾದರೂ ವಿಷ್ಣುಸ್ಮರಣೆಯೊಂದಿಗೆ ನೀಡಿ.

ಹೀಗಾಗಿ ನಿಮ್ಮನಿಮ್ಮ ಮನೆಯ ಅಂಗಳದಲ್ಲಿ ನಿಂತು ಭಕ್ತಿಯಿಂದ ವಿಷ್ಣುಸ್ಮರಣೆ ಮಾಡುತ್ತ ಆ ಜೀವಕ್ಕೆ ಸದ್ಗತಿಯಾಗಲಿ ಎಂದು ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತ ಧರ್ಮೋದಕವನ್ನು ನೀಡಿ. ನಿಶ್ಚಿತವಾಗಿ ಅದು ಆ ಜೀವದ ತೃಪ್ತಿಗೆ  ಮತ್ತು ಸದ್ಗತಿಗೆ ಕಾರಣವಾಗುತ್ತದೆ.

## ಮನೆಯ ಹೊರಗೆ ಧರ್ಮೋದಕದ ಪ್ರಕ್ರಿಯೆ

ನಿಮಗೆ ಅಶೌಚ ಮುಗಿದಿದ್ದರೆ ಸ್ನಾನ ಸಂಧ್ಯಾವಂದನೆ ದೇವರ ಪೂಜೆ ಮುಗಿಸಿ.

ದೇವರ ನಿರ್ಮಾಲ್ಯ ತುಳಸೀ
ನಾಕಾರು ದರ್ಭೆಗಳು
ಆಚಮನದ ನೀರಿರುವ ಪಾತ್ರೆ,
ತರ್ಪಣದ ನೀರಿರುವ ಪಾತ್ರೆ,
ಎರಡರಲ್ಲಿಯೂ ಬೇರೆ ಬೇರೆ ಉದ್ಧರಣೆ
ನೀರನ್ನು ಹಾಕುವ ಅರ್ಘ್ಯಪಾತ್ರೆ,
ಎಳ್ಳು
ಒಂದು ವೀಳ್ಯದೆಲೆ, ಒಂದು ಅಡಿಕೆ, Coin ನ ರೂಪದಲ್ಲಿರುವ ದಕ್ಷಿಣೆ.
ಇಷ್ಟನ್ನು ಮೊದಲೇ ಅಂಗಳದಲ್ಲಿಟ್ಟುಕೊಳ್ಳಿ.

ಆ ನಂತರ ಮತ್ತೊಮ್ಮೆ ಸ್ನಾನ ಮಾಡಿ. ಮನೆಯ ಅಂಗಳ ಅಥವಾ ಹಿತ್ತಲಿನಲ್ಲಿ ನಲ್ಲಿ ಇದ್ದರೆ ಅಲ್ಲಿಯೇ ಸ್ನಾನವನ್ನು ಮಾಡಿ. ಇಲ್ಲದಿದ್ದರೆ ಮನೆಯೊಳಗೇ ಸ್ನಾನ ಮಾಡಿ, ಮೈ ವರೆಸಿಕೊಳ್ಳದೇ ಹೊರಗೆ ಬನ್ನಿ.

**ನಿಮ್ಮ ದೇಹದಲ್ಲಿ ಅನಾರೋಗ್ಯವಿದ್ದರೆ ಮತ್ತೆ ಸ್ನಾನ ಮಾಡಬೇಡಿ. ಒಂದು ಒಣಗಿರುವ ಶುಭ್ರವಾದ ಮಡಿಪಂಚೆಯನ್ನುಟ್ಟುಕೊಂಡು ಕಾರ್ಯ ಮಾಡಿ. ಆರೋಗ್ಯ ಕೆಡೆಸಿಕೊಳ್ಳಬೇಡಿ. ಒದ್ದೆಬಟ್ಟೆ ಆರೋಗ್ಯಕ್ಕೆ ಹಾನಿಕರ.**

ಒಂದು ದರ್ಭೆಯನ್ನು ನೆಲದ ಮೇಲೆ ಹಾಕಿ ಅದರ ಮೇಲೆ ಪೂರ್ವಕ್ಕೆ ಮುಖ ಮಾಡಿ ಕುಳಿತುಕೊಳ್ಳಿ.

ಸ್ನಾನ ಮಾಡಿದವರು ಪೂರ್ವಕ್ಕೆ ಮುಖ ಮಾಡಿ ಕುಳಿತು ಗೋಪೀಚಂದನ ಧರಿಸಿ.

ಆ ಬಳಿಕ ಆಚಮನ ಮಾಡಿ ಪ್ರಾಣಾಯಾಮ ಮಾಡಿ ಒಂದು ದರ್ಭೆಯಿಂದ ಪವಿತ್ರ ಮಾಡಿ ಅದನ್ನು ತೋರುಬೆರಳಿಗೆ ಧರಿಸಿ.

ಪವಿತ್ರ ಮಾಡಲು ಬರಲಿಲ್ಲ ಎಂದರೆ ನಮ್ಮ ವಿಶ್ವನಂದಿನಿಯ ಬಾಂಧವರಾದ ಶ್ರೀ ನರಹರಿ ರಟ್ಟೆಹಳ್ಳಿಯವರು ಮಾಡಿರುವ ಈ ವಿಡಿಯೋವನ್ನು ನೋಡಿ ಕಲಿಯಬಹುದು.



[https://www.youtube.com/watch?v=0SngqKaByRE](https://www.youtube.com/watch?v=0SngqKaByRE)

ಆದರೂ ಬರಲಿಲ್ಲ ಎಂದರೆ ಚಿಂತೆ ಬೇಡ. ಒಂದು ದರ್ಭೆಯನ್ನು ತೋರುಬೆರಳಿಗೆ ನಾರಾಯಣ ಎಂದು ಭಕ್ತಿಯಿಂದ ಹರಿಸ್ಮರಣೆ ಮಾಡುತ್ತ ಗಂಟು ಹಾಕಿಕೊಂಡು ಕಾರ್ಯ ಮಾಡಿ. ಹರಿಸ್ಮರಣೆ ಫಲ ನೀಡುತ್ತದೆ.

## ಋಗ್ವೇದಕ್ಕೂ ಯಜುರ್ವೇದಕ್ಕೂ ಇರುವ ವ್ಯತ್ಯಾಸ

ಋಗ್ವೇದಿಗಳು ಮತ್ತು ಸಾಮವೇದಿಗಳು ಮೊದಲು ಹೆಸರನ್ನು ಹೇಳಿ ಗೋತ್ರವನ್ನು ಹೇಳಬೇಕು.

ಯಜುರ್ವೇದಿಗಳ ಮೊದಲಿಗೆ ಗೋತ್ರವನ್ನು ಹೇಳಿ ನಂತರ ಹೆಸರನ್ನು ಹೇಳಬೇಕು.

ಇದು ಶ್ರಾದ್ಧಕ್ಕೂ ಅನ್ವಯಿಸುತ್ತದೆ.

ಇದು ನಿಮ್ಮ ವೇದಕ್ಕೆ ಸಂಬಂಧಿಸಿದ್ದು. ಮೃತ ವ್ಯಕ್ತಿ ಯಾವುದೇ ವೇದದವರಾಗಿರಲಿ ನೀವು ನಿಮ್ಮ ವೇದದಂತೆ ಧರ್ಮೋದಕ, ತರ್ಪಣಗಳನ್ನು ನೀಡತಕ್ಕದ್ದು.

## ಋಗ್ವೇದ ಮತ್ತು ಸಾಮವೇದದ ಕ್ರಮ

**ಅದ್ಯ ಪೂರ್ವೋಚ್ಚಾರಿತ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭಪುಣ್ಯತಿಥೌ**

**ಅಸ್ಮದ್ಗುರ್ವಂತರ್ಗತ**
**ಪರಮಗುರ್ವಂತರ್ಗತ**
**ಸಮಸ್ತಋಷಿ-ದೇವತಾಂತರ್ಗತ**

**ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ**

**ಮಮ ಬಾಂಧವಸ್ಯ**

(ಮೃತವ್ಯಕ್ತಿಗೂ ತನಗೂ ಇರುವ ಚಿಕ್ಕಪ್ಪ, ಮಾವ, ಅಳಿಯ ಇತ್ಯಾದಿ ಸಂಬಂಧವನ್ನು ಹೇಳಿಕೊಳ್ಳಬೇಕು, ಸಂಬಂಧಗಳ ಪಟ್ಟಿಯನ್ನು ಕಡೆಯಲ್ಲಿ ನೀಡಿದ್ದೇನೆ)

**(ಮೃತವ್ಯಕ್ತಿಯ ಹೆಸರು) .....  ಶರ್ಮಣಃ**
**(ಮೃತವ್ಯಕ್ತಿಯ ಗೋತ್ರ) .....  ಗೋತ್ರಸ್ಯ**

**ಪ್ರೇತಸ್ಯ ದಹನ ಜನಿತ ಕ್ಷುತ್-ಪಿಪಾಸಾ ನಿವೃತ್ತ್ಯರ್ಥಂ ಮೃತಾಹಾತ್ ದಶಮೇ ದಿನೇ ಧರ್ಮೋದಕಾಖ್ಯಂ ಕರ್ಮ ಕರಿಷ್ಯೇ**

ಎಂದು ಉದ್ಧರಣೆಯಿಂದ ನೀರನ್ನು ಹಾಕಿಕೊಂಡು ಪಾತ್ರೆಯಲ್ಲಿ ಬಿಡಿ. (ತರ್ಪಣವಲ್ಲ ಇದು. ಅರ್ಘ್ಯ ಬಿಡುವಂತೆ ಬಿಡಬೇಕು)

**ನಾಹಂ ಕರ್ತಾ ಹರಿಃ ಕರ್ತಾ**
**ತತ್ಪೂಜಾ ಕರ್ಮ ಚಾಖಿಲಮ್**
**ತಥಾಪಿ ಮತ್ಕೃತಾ ಪೂಜಾ**

**ತತ್ಪ್ರಸಾದೇನ ನಾನ್ಯಥಾ**
**ತದ್ಭಕ್ತಿಸ್ತತ್ಫಲಂ ಮಹ್ಯಂ**
**ತತ್ಪ್ರಸಾದಃ ಪುನಃಪುನಃ**
**ಕರ್ಮನ್ಯಾಸೋ ಹರಾವೇವಂ**
**ವಿಷ್ಣೋಸ್ತೃಪ್ತಿಕರಃ ಸದಾ**

ಎಂದು ಹೇಳಿ ದೇವರೇ ನನ್ನಲ್ಲಿ ನಿಂತು ಈ ಕಾರ್ಯ ಮಾಡಿಸುತ್ತಿದ್ದಾನೆ, ಈ ಕಾರ್ಯದ ಫಲವನ್ನು ಮೃತಜೀವಕ್ಕೆ ತಲುಪಿಸುವವನೂ ಪ್ರಾಣಪತಿಯಾದ ಶ್ರೀಹರಿ ಎಂದು ಚಿಂತನೆ ಮಾಡುತ್ತ ದೇವರಿಗೆ ಕೈ ಮುಗಿಯಿರಿ.

**ಆ ನಂತರ ದಕ್ಷಿಣಕ್ಕೆ ಮುಖ ಮಾಡಿ ಕುಳಿತುಕೊಂಡು ಜನಿವಾರವನ್ನು ಅಪಸವ್ಯವಾಗಿ ಹಾಕಿಕೊಳ್ಳಿ**. ನಾರಾಯಣ ನಾರಾಯಣ ಎಂದು ಹರಿಸ್ಮರಣೆ ಮಾಡುತ್ತಲೇ ಇರಿ.

ಕರ್ಮದಲ್ಲಿರುವ ಎಲ್ಲ ನ್ಯೂನತೆಗಳನ್ನು ಕಳೆದು ಸಫಲಗೊಳಿಸುವದೇ ಶ್ರೀಹರಿಸ್ಮರಣೆ ಎನ್ನುವದನ್ನು ಮರೆಯಬೇಡಿ.

ಆ ಬಳಿಕ ನಿಮ್ಮ ಮುಂದಿರುವ ಪ್ರದೇಶವನ್ನು ತರ್ಪಣ ನೀಡುವ ನೀರಿನಿಂದ ಪ್ರೋಕ್ಷಣೆ ಮಾಡಿ.

ಅದರ ಮೇಲೆ ಉಳಿದಿರುವ ದರ್ಭೆಗಳನ್ನು ದಕ್ಷಿಣಾಗ್ರವಾಗಿ ಹಾಕಿ.

ಆ ನಂತರ ನಿಮ್ಮಬಲ ಅಂಗೈ ಮಧ್ಯಕ್ಕೆ ಎಳ್ಳು ಅದರ ಮೇಲೆ ನಿರ್ಮಾಲ್ಯ ತುಳಸಿ ಹಾಕಿಕೊಳ್ಳಿ.

ಆ ನಂತರ ತರ್ಪಣ ನೀಡುವ ನೀರಿರುವ ಪಾತ್ರೆಯಿಂದ ಎಡಗೈಯಲ್ಲಿ ಉದ್ದರಣೆಯಿಂದ ನೀರನ್ನು ತೆಗೆದುಕೊಂಡು ನಿಮ್ಮ ಬಲ ಅಂಗೈಗೆ ಹಾಕಿಕೊಂಡು

ಗಂಡಸರು ಮೃತರಾಗಿದ್ದರೆ

**ಮಮ ಬಾಂಧವಾಯ**

(ಸಂಬಂಧ ಹೇಳಿಕೊಳ್ಳಬೇಕು)

**………………. ಶರ್ಮಣೇ**

**……………….ಗೋತ್ರಸ್ಯ**

ಹೆಂಗಸರು ಮೃತರಾಗಿದ್ದರೆ

**ಮಮ ಬಂಧುಭೂತಾಯೈ**
(ಸಂಬಂಧ ಹೇಳಿಕೊಳ್ಳಬೇಕು)
**.................... ಅಭಿಧಾಯೈ**
**....................ಗೋತ್ರಾಯೈ**

(ಗಂಡಸರು ಮೃತರಾಗಿದ್ದರೆ ಪ್ರೇತಸ್ಯ ಎಂದೂ ಹೆಂಗಸರು ಮೃತರಾಗಿದ್ದರೆ ಪ್ರೇತಾಯಾಃ ಎಂದೂ ಹೇಳಬೇಕು)

**ಪ್ರೇತಸ್ಯ/ಪ್ರೇತಯಾಃ**

**ದಾಹಜನಿತ-ಕ್ಷುತ್-ಪಿಪಾಸಾ-ದಾಹತಾಪ-ಉಪಶಮನಾರ್ಥಂ**

**ಪ್ರೇತಸ್ಯ/ಪ್ರೇತಯಾಃ ಆಪ್ಯಾಯನಾರ್ಥಂ**

**ಪ್ರೇತತೃಪ್ತ್ಯರ್ಥಂ**

**ಏತತ್ ತಿಲೋದಕಂ ದದಾಮಿ**[1]

---

[1] ಪ್ರೇತಕಾರ್ಯಗಳಲ್ಲಿ ಉಪತಿಷ್ಠತು ಇತ್ಯಾದಿ ವಾಕ್ಯಗಳ ಬಳಕೆಯಿದೆ. ಆದರೆ ಧರ್ಮೋದಕವನ್ನು ನೀಡುವಾಗ ಮಾತ್ರ ದದಾಮಿ ಇತ್ಯಾದಿ ವಾಕ್ಯಗಳನ್ನೇ ಬಳಸಬೇಕು ಎಂದು ಗೃಹ್ಯಸೂತ್ರಗಳಲ್ಲಿ ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದಾರೆ.

ಎಂದು ತಿಲತರ್ಪಣವನ್ನು ಆ ದರ್ಭೆಗಳ ಮೇಲೆ ಬಿಡಬೇಕು.

ಆ ಬಳಿಕ ಒಂದು ವೀಳ್ಯದೆಲೆ, ಒಂದು ಅಡಿಕೆ, ಅದರಲ್ಲಿ ದಕ್ಷಿಣೆ ಇವನ್ನು ತೆಗೆದುಕೊಂಡು ನೀವು ಮಾಡಿರುವ ಒಂದು ಅಥವಾ ಅನೇಕ ಏಕಾದಶಿಗಳ ಪುಣ್ಯವೋ, ಅಥವಾ ಮಾಡಿರುವ ದೇವರ ಪೂಜೆಯೋ, ಅಥವಾ ಮಾಡಿರುವ ಯಾವುದಾದರೂ ಒಂದು ತೀರ್ಥಯಾತ್ರೆಯ ಪುಣ್ಯವೋ ಅದನ್ನು ಆ ಜೀವಕ್ಕೆ ನೀಡಬೇಕು.

**ಮಯಾ ಕೃತೇನ**
**ಅಮುಕ ಸತ್ಕರ್ಮಣಾ**
(ನೀವು ನೀಡಬೇಕೆಂದಿರುವ ನೀವು ಮಾಡಿರುವ ಸತ್ಕರ್ಮವನ್ನು ಕನ್ನಡದಲ್ಲಿಯೇ ಹೇಳಿಕೊಳ್ಳಿ)
**ಯತ್ ಫಲಂ**
**ತತ್ ಫಲಂ**
**ಸದಕ್ಷಿಣಂ**
**ಸತಾಂಬೂಲಂ**

ಗಂಡಸರು ಮೃತರಾಗಿದ್ದರೆ

**ಮಮ ಬಾಂಧವಾಯ**

(ಸಂಬಂಧ ಹೇಳಿಕೊಳ್ಳಬೇಕು)
**.................... ಶರ್ಮಣೇ**
**....................ಗೋತ್ರಸ್ಯ**

ಹೆಂಗಸರು ಮೃತರಾಗಿದ್ದರೆ

**ಮಮ ಬಂಧುಭೂತಾಯೈ**
(ಸಂಬಂಧ ಹೇಳಿಕೊಳ್ಳಬೇಕು)
**.................... ಅಭಿಧಾಯೈ**
**....................ಗೋತ್ರಾಯೈ**

**ದದಾಮಿ.**

ಎಂದು ಆ ವೀಳ್ಯದೆಲೆ ಅಡಿಕೆ ದಕ್ಷಿಣೆಯನ್ನು ಆ ದರ್ಭೆಗಳ ಮೇಲಿಡಬೇಕು.

ಆ ನಂತರ ನಾವು ಮಾಡಿದ ಕರ್ಮಗಳ
ಅಧಿಪತಿಯಾದ ಯಮಧರ್ಮದೇವರು
ಅವರ ಅಂತರ್ಯಾಮಿಯಾದ
ಭಾರತೀಪತಿ ಪ್ರಾಣದೇವರು
ಅವರ ಅಂತರ್ಯಾಮಿಯಾದ ಸೀತಾರಾಮ
ಮತ್ತು ಪರಶುರಾಮ ರೂಪಗಳನ್ನು ಧ್ಯಾನಿಸಿ

ಕೈಮುಗಿದು ನಾನು ಮಾಡಿರುವ ಈ ಸತ್ಕರ್ಮದ ಫಲವನ್ನು ಈ ಜೀವಕ್ಕೆ ನೀಡಿ ಎಂದು ಪ್ರಾರ್ಥಿಸಬೇಕು.

**ಮಯಾ ಕೃತೇನ ಏತತ್ಕರ್ಮಣಾ ಪ್ರಾಪ್ಯಂ ಫಲಂ ಭಗವಾನ್ ಪ್ರೇತಾಯ/ಪ್ರೇತಾಯೈ ಪ್ರಾರ್ಪಯತು.**

ಆ ಬಳಿಕ ಪೂರ್ವಕ್ಕೆ ತಿರುಗಿ ಆಚಮನ ಮಾಡಬೇಕು.

ಪವಿತ್ರವನ್ನು ವಿಸರ್ಜಿಸಬೇಕು.

ಆ ನಂತರ ಎರಡು ಬಾರಿ ಆಚಮನ ಮಾಡಿ

ಅನೇನ ಮಯಾ ಕೃತೇನ ಆಪತ್ಕಾಲೀನ ಧರ್ಮೋದಕವಿಧಿನಾ ಭಾರತೀರಮಣಮುಖ್ಯಪ್ರಾಣಾಂತರ್ಗತಃ ಶ್ರೀ ಲಕ್ಷ್ಮೀನಾರಾಯಣಃ ಪ್ರೀಯತಾಂ

ಎಂದು ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಬೇಕು.

## ಯಜುರ್ವೇದದ ಕ್ರಮ

**ಅದ್ಯ ಪೂರ್ವೋಚ್ಚಾರಿತ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭಪುಣ್ಯತಿಥೌ**

**ಅಸ್ಮದ್ಗುರ್ವಂತರ್ಗತ**
**ಪರಮಗುರ್ವಂತರ್ಗತ**
**ಸಮಸ್ತಋಷಿ-ದೇವತಾಂತರ್ಗತ**
**ಭಾರತೀರಮಣಮುಖ್ಯಪ್ರಾಣಾಂತರ್ಗತ**
**ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ**

**ಮಮ ಬಾಂಧವಸ್ಯ**

(ಮೃತವ್ಯಕ್ತಿಗೂ ತನಗೂ ಇರುವ ಚಿಕ್ಕಪ್ಪ, ಮಾವ, ಅಳಿಯ ಇತ್ಯಾದಿ ಸಂಬಂಧವನ್ನು ಹೇಳಿಕೊಳ್ಳಬೇಕು, ಸಂಬಂಧಗಳ ಪಟ್ಟಿಯನ್ನು ಕಡೆಯಲ್ಲಿ ನೀಡಿದ್ದೇನೆ)

**(ಮೃತವ್ಯಕ್ತಿಯ ಗೋತ್ರ) ..... ಗೋತ್ರಸ್ಯ**
**(ಮೃತವ್ಯಕ್ತಿಯ ಹೆಸರು) ..... ಶರ್ಮಣಃ**

**ಪ್ರೇತಸ್ಯ ದಹನ ಜನಿತ ಕ್ಷುತ್-ಪಿಪಾಸಾ ನಿವೃತ್ತ್ಯರ್ಥಂ ಮೃತಾಹಾತ್ ದಶಮೇ ದಿನೇ ಧರ್ಮೋದಕಾಖ್ಯಂ ಕರ್ಮ ಕರಿಷ್ಯೇ**

ಎಂದು ಉದ್ಧರಣೆಯಿಂದ ನೀರನ್ನು ಹಾಕಿಕೊಂಡು ಪಾತ್ರೆಯಲ್ಲಿ ಬಿಡಿ. (ತರ್ಪಣವಲ್ಲ ಇದು. ಅರ್ಘ್ಯ ಬಿಡುವಂತೆ ಬಿಡಬೇಕು)

**ನಾಹಂ ಕರ್ತಾ ಹರಿಃ ಕರ್ತಾ**
**ತತ್ಪೂಜಾ ಕರ್ಮ ಚಾಖಿಲಮ್**
**ತಥಾಪಿ ಮತ್ಕೃತಾ ಪೂಜಾ**
**ತತ್ಪ್ರಸಾದೇನ ನಾನ್ಯಥಾ**
**ತದ್ಭಕ್ತಿಸ್ತತ್ಫಲಂ ಮಹ್ಯಂ**
**ತತ್ಪ್ರಸಾದಃ ಪುನಃಪುನಃ**
**ಕರ್ಮನ್ಯಾಸೋ ಹರಾವೇವಂ**
**ವಿಷ್ಣೋಸ್ತೃಪ್ತಿಕರಃ ಸದಾ**

ಎಂದು ಹೇಳಿ ದೇವರೇ ನನ್ನಲ್ಲಿ ನಿಂತು ಈ ಕಾರ್ಯ ಮಾಡಿಸುತ್ತಿದ್ದಾನೆ, ಈ ಕಾರ್ಯದ ಫಲವನ್ನು ಮೃತಜೀವಕ್ಕೆ ತಲುಪಿಸುವವನೂ ಪ್ರಾಣಪತಿಯಾದ ಶ್ರೀಹರಿ ಎಂದು ಚಿಂತನೆ ಮಾಡುತ್ತ ದೇವರಿಗೆ ಕೈ ಮುಗಿಯಿರಿ.

**ಆ ನಂತರ ದಕ್ಷಿಣಕ್ಕೆ ಮುಖ ಮಾಡಿ ಕುಳಿತುಕೊಂಡು ಜನಿವಾರವನ್ನು ಅಪಸವ್ಯವಾಗಿ ಹಾಕಿಕೊಳ್ಳಿ**. ನಾರಾಯಣ ನಾರಾಯಣ ಎಂದು ಹರಿಸ್ಮರಣೆ ಮಾಡುತ್ತಲೇ ಇರಿ.

ಕರ್ಮದಲ್ಲಿರುವ ಎಲ್ಲ ನ್ಯೂನತೆಗಳನ್ನು ಕಳೆದು ಸಫಲಗೊಳಿಸುವದೇ ಶ್ರೀಹರಿಸ್ಮರಣೆ ಎನ್ನುವದನ್ನು ಮರೆಯಬೇಡಿ.

ಆ ಬಳಿಕ ನಿಮ್ಮ ಮುಂದಿರುವ ಪ್ರದೇಶವನ್ನು ತರ್ಪಣ ನೀಡುವ ನೀರಿನಿಂದ ಪ್ರೋಕ್ಷಣೆ ಮಾಡಿ.

ಅದರ ಮೇಲೆ ಉಳಿದಿರುವ ದರ್ಭೆಗಳನ್ನು ದಕ್ಷಿಣಾಗ್ರವಾಗಿ ಹಾಕಿ.

ಆ ನಂತರ ನಿಮ್ಮಬಲ ಅಂಗೈ ಮಧ್ಯಕ್ಕೆ ಎಳ್ಳು ಅದರ ಮೇಲೆ ನಿರ್ಮಾಲ್ಯ ತುಳಸಿ ಹಾಕಿಕೊಳ್ಳಿ.

ಆ ನಂತರ ತರ್ಪಣ ನೀಡುವ ನೀರಿರುವ ಪಾತ್ರೆಯಿಂದ ಎಡಗೈಯಲ್ಲಿ ಉದ್ದರಣೆಯಿಂದ ನೀರನ್ನು ತೆಗೆದುಕೊಂಡು ನಿಮ್ಮ ಬಲ ಅಂಗೈಗೆ ಹಾಕಿಕೊಂಡು

ಗಂಡಸರು ಮೃತರಾಗಿದ್ದರೆ

**ಮಮ ಬಾಂಧವಾಯ**
(ಸಂಬಂಧ ಹೇಳಿಕೊಳ್ಳಬೇಕು)
**…………………ಗೋತ್ರಸ್ಯ**
**………………… ಶರ್ಮಣೇ**

ಹೆಂಗಸರು ಮೃತರಾಗಿದ್ದರೆ

**ಮಮ ಬಂಧುಭೂತಾಯೈ**
(ಸಂಬಂಧ ಹೇಳಿಕೊಳ್ಳಬೇಕು)
**…………………ಗೋತ್ರಾಯೈ**
**………………… ಅಭಿಧಾಯೈ**

(ಗಂಡಸರು ಮೃತರಾಗಿದ್ದರೆ ಪ್ರೇತಸ್ಯ ಎಂದೂ ಹೆಂಗಸರು ಮೃತರಾಗಿದ್ದರೆ ಪ್ರೇತಾಯಾಃ ಎಂದೂ ಹೇಳಬೇಕು)

**ಪ್ರೇತಸ್ಯ/ಪ್ರೇತಯಾಃ**

**ದಾಹಜನಿತ-ಕ್ಷುತ್-ಪಿಪಾಸಾ-ದಾಹತಾಪ-ಉಪಶಮನಾರ್ಥಂ**

**ಪ್ರೇತಸ್ಯ/ಪ್ರೇತಯಾಃ ಆಪ್ಯಾಯನಾರ್ಥಂ**

**ಪ್ರೇತತೃಪ್ತ್ಯರ್ಥಂ**

**ಏತತ್ ತಿಲೋದಕಂ ದದಾಮಿ**[2]

ಎಂದು ತಿಲತರ್ಪಣವನ್ನು ಆ ದರ್ಭೆಗಳ ಮೇಲೆ ಬಿಡಬೇಕು.

ಆ ಬಳಿಕ ಒಂದು ವೀಳ್ಯದೆಲೆ, ಒಂದು ಅಡಿಕೆ, ಅದರಲ್ಲಿ ದಕ್ಷಿಣೆ ಇವನ್ನು ತೆಗೆದುಕೊಂಡು ನೀವು ಮಾಡಿರುವ ಒಂದು ಅಥವಾ ಅನೇಕ ಏಕಾದಶಿಗಳ ಪುಣ್ಯವೋ, ಅಥವಾ ಮಾಡಿರುವ ದೇವರ ಪೂಜೆಯೋ, ಅಥವಾ ಮಾಡಿರುವ ಯಾವುದಾದರೂ ಒಂದು ತೀರ್ಥಯಾತ್ರೆಯ ಪುಣ್ಯವೋ ಅದನ್ನು ಆ ಜೀವಕ್ಕೆ ನೀಡಬೇಕು.

---

[2] ಪ್ರೇತಕಾರ್ಯಗಳಲ್ಲಿ ಉಪತಿಷ್ಠತು ಇತ್ಯಾದಿ ವಾಕ್ಯಗಳ ಬಳಕೆಯಿದೆ. ಆದರೆ ಧರ್ಮೋದಕವನ್ನು ನೀಡುವಾಗ ಮಾತ್ರ ದದಾಮಿ ಇತ್ಯಾದಿ ವಾಕ್ಯಗಳನ್ನೇ ಬಳಸಬೇಕು ಎಂದು ಗೃಹ್ಯಸೂತ್ರಗಳಲ್ಲಿ ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದಾರೆ.

**ಮಯಾ ಕೃತೇನ**
**ಅಮುಕ ಸತ್ಕರ್ಮಣಾ**
(ನೀವು ನೀಡಬೇಕೆಂದಿರುವ ನೀವು ಮಾಡಿರುವ ಸತ್ಕರ್ಮವನ್ನು ಕನ್ನಡದಲ್ಲಿಯೇ ಹೇಳಿಕೊಳ್ಳಿ)
**ಯತ್ ಫಲಂ**
**ತತ್ ಫಲಂ**
**ಸದಕ್ಷಿಣಂ**
**ಸತಾಂಬೂಲಂ**

ಗಂಡಸರು ಮೃತರಾಗಿದ್ದರೆ

**ಮಮ ಬಾಂಧವಾಯ**
(ಸಂಬಂಧ ಹೇಳಿಕೊಳ್ಳಬೇಕು)
**…………………ಗೋತ್ರಸ್ಯ**
**………………… ಶರ್ಮಣೇ**

ಹೆಂಗಸರು ಮೃತರಾಗಿದ್ದರೆ

**ಮಮ ಬಂಧುಭೂತಾಯೈ**
(ಸಂಬಂಧ ಹೇಳಿಕೊಳ್ಳಬೇಕು)
**…………………ಗೋತ್ರಾಯೈ**
**………………… ಅಭಿಧಾಯೈ**

**ದದಾಮಿ.**

ಎಂದು ಆ ವೀಳ್ಯದೆಲೆ ಅಡಿಕೆ ದಕ್ಷಿಣೆಯನ್ನು ಆ ದರ್ಭೆಗಳ ಮೇಲಿಡಬೇಕು.

ಆ ನಂತರ ನಾವು ಮಾಡಿದ ಕರ್ಮಗಳ
ಅಧಿಪತಿಯಾದ ಯಮಧರ್ಮದೇವರು
ಅವರ ಅಂತರ್ಯಾಮಿಯಾದ
ಭಾರತೀಪತಿ ಪ್ರಾಣದೇವರು
ಅವರ ಅಂತರ್ಯಾಮಿಯಾದ ಸೀತಾರಾಮ ಮತ್ತು ಪರಶುರಾಮ ರೂಪಗಳನ್ನು ಧ್ಯಾನಿಸಿ ಕೈಮುಗಿದು ನಾನು ಮಾಡಿರುವ ಈ ಸತ್ಕರ್ಮದ ಫಲವನ್ನು ಈ ಜೀವಕ್ಕೆ ನೀಡಿ ಎಂದು ಪ್ರಾರ್ಥಿಸಬೇಕು.

**ಮಯಾ ಕೃತೇನ ಏತತ್ಕರ್ಮಣಾ ಪ್ರಾಪ್ಯಂ ಫಲಂ ಭಗವಾನ್ ಪ್ರೇತಾಯ/ಪ್ರೇತಾಯೈ ಪ್ರಾರ್ಪಯತು.**

ಆ ಬಳಿಕ ಪೂರ್ವಕ್ಕೆ ತಿರುಗಿ ಆಚಮನ ಮಾಡಬೇಕು.

ಪವಿತ್ರವನ್ನು ವಿಸರ್ಜಿಸಬೇಕು.

ಆ ನಂತರ ಎರಡು ಬಾರಿ ಆಚಮನ ಮಾಡಿ

ಅನೇನ ಮಯಾ ಕೃತೇನ ಆಪತ್ಕಾಲೀನ
ಧರ್ಮೋದಕವಿಧಿನಾ
ಭಾರತೀರಮಣಮುಖ್ಯಪ್ರಾಣಾಂತರ್ಗತಃ
ಶ್ರೀ ಲಕ್ಷ್ಮೀನಾರಾಯಣಃ ಪ್ರೀಯತಾಂ

ಎಂದು ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಬೇಕು.

## ವಿಸರ್ಜನೆ

ಆ ನಂತರ ಆ ದರ್ಭೆಗಳು ಎಳ್ಳು, ವೀಳ್ಯದೆಲೆ, ಅಡಿಕೆ ದಕ್ಷಿಣೆ ಎಲ್ಲವನ್ನೂ ಒಂದು ಮರದ ಕೆಳಗೆ ಹಾಕಬೇಕು.

ಈ ಸಂದರ್ಭದಲ್ಲಿ ಅದು ಸಾಧ್ಯವಿಲ್ಲದಿದ್ದರೆ ದಕ್ಷಿಣೆಯನ್ನು ಹೊರತುಪಡಿಸಿ ಎಲ್ಲವನ್ನೂ ಒಂದು pot ನೊಳಗೆ ಹಾಕಿ ಅದರ ಮೇಲೆ ಮಣ್ಣು ಹಾಕಿಬಿಡಬೇಕು.

ದಕ್ಷಿಣೆಯನ್ನು ಮಾತ್ರ ಮನೆಯ ಹೊರಗೆ ಇಟ್ಟುಬಿಡಿ. ಅದನ್ನು ಯಾರಾದರೂ ತೆಗೆದುಕೊಳ್ಳಲಿ.

ಅದನ್ನು ಸ್ವೀಕರಿಸುವ ಬ್ರಾಹ್ಮಣರು ಯಾರಾದರೂ ಇದ್ದರೆ ಅದನ್ನೇ ಅವರಿಗೆ ತಲುಪಿಸಬೇಕು. ಈ ಸಂದರ್ಭದಲ್ಲಿ ಅದು ಕಷ್ಟವಾದ್ದರಿಂದ ಮನೆಯ ಹೊರಗಿಟ್ಟುಬಿಟ್ಟರಾಯಿತು.

ಆ ನಂತರ ಮನೆಯ ಬಾಗಿಲಿನ ಬಳಿ ಬರಬೇಕು. ನಿಂಬೆಗಿಡದ ಎಲೆ ಇದ್ದರೆ ಮೊದಲೇ ಅಲ್ಲಿಟ್ಟಿರಬೇಕು. ಅದನ್ನು ಸ್ವಲ್ಪ ಅಗಿದು ಮನೆಯ

ಹೊರಗೆ ಉಗಿದು ಮನೆಯ ಒಳಗೆ ಬಂದು ತಲೆಗೆ ಸ್ನಾನ ಮಾಡಬೇಕು.

ಆರೋಗ್ಯವಿದ್ದವರು ತಣ್ಣೀರಿನ ಸ್ನಾನ ಮಾಡಬೇಕು.

ಆರೋಗ್ಯ ಸರಿ ಇಲ್ಲದವರು ಸರ್ವಥಾ ತಣ್ಣೀರಿನ ಸ್ನಾನ ಮಾಡಬೇಡಿ. ತಲೆ ಸ್ನಾನ ಮಾಡಿದರೆ ಅನಾರೋಗ್ಯಕ್ಕೆ ಈಡಾಗುವವರೂ ಸಹ ತಲೆ ಸ್ನಾನ ಮಾಡಬೇಡಿ. ಬಿಸಿನೀರಿನ ಸ್ನಾನ ಮಾಡಬೇಕು.

ಕ್ರಿಯೆ ನಡೆಯುವ ಸ್ಥಳದಲ್ಲಿ ಧರ್ಮೋದಕ ನೀಡಿದಾಗ ಅಶೌಚ ಇರುವವರ, ಪ್ರೇತಶಿಲೆಯ ಸಂಪರ್ಕವಾಗಿರುತ್ತದೆಯಾದ್ದರಿಂದ ಜನಿವಾರ ಬದಲಾಯಿಸಬೇಕು.

ಆದರೆ ಮನೆಯಲ್ಲಿಯೇ ಮಾಡಿದಾಗ ಅದ್ಯಾವುದರ ಸಂಪರ್ಕವಾಗಿರುವದಿಲ್ಲವಾದ್ದರಿಂದ ಜನಿವಾರ ಬದಲಾಯಿಸಬೇಕಾಗಿಲ್ಲ.

ಹತ್ತು ದಿವಸದ ಅಶೌಚ ಇದ್ದವರು ಮಾರನೆಯ ದಿವಸ ಶುದ್ಧಿಸ್ನಾನ ಮಾಡಿ ಜನಿವಾರ ಬದಲಾಯಿಸಬೇಕು.

## ಮರೆಯಬಾರದ ಮಾತು

ಧರ್ಮೋದಕ ಎನ್ನುವದು ಸರ್ವಥಾ ಮನೆಯಲ್ಲಿ ಮಾಡುವ ಕ್ರಿಯೆಯಲ್ಲ. ಯಾವುದನ್ನು ಮಾಡುವದರಿಂದ ದೋಷವುಂಟಾಗುವದಿಲ್ಲವೋ ಮತ್ತು ಮಾಡಬಹುದು ಎಂದು ಶಾಸ್ತ್ರವೇ ಅನುಮತಿ ನೀಡಿದೆಯೋ ಅದನ್ನು ಮಾತ್ರ ನೀಡಿದ್ದೇನೆ.

ಕಾರಣ,  ರಾಷ್ಟ್ರಕ್ಷೋಭ, ಯುದ್ದ, ರೋಗಗಳ ಸಂದರ್ಭದಲ್ಲಿ ನಿಯಮಗಳಿಗೆ ಸಡಲಿಕೆ ಖಂಡಿತ ಉಂಟು.

ಹೀಗಾಗಿ ಯಾವುದನ್ನು ಹೊರಗೇ ಮಾಡಬೇಕೋ ಅದನ್ನು ಈ ಪ್ರಕ್ರಿಯೆಯಲ್ಲಿ ಸೇರಿಸಿಯೇ ಇಲ್ಲ.

ಮಾಡಲೇಬೇಕಾದ ಕಡೆಯ ಧರ್ಮೋದಕದ ವಿಧಿಯನ್ನು ಮಾತ್ರ ತಿಳಿಸಿದ್ದೇನೆ.

ಮತ್ತು ಹತ್ತಾರು ಗ್ರಂಥಗಳನ್ನು ಅವಲೋಕಿಸಿ ನಿರ್ಣಯ ಮಾಡಿಕೊಂಡೇ ಎಲ್ಲವನ್ನೂ ಬರೆದಿದ್ದೇನೆ.

ಆದರೆ, ನಾನೂ ಸಹ ಅನಾರೋಗ್ಯದಿಂದ ಈಗ ತಾನೇ ಚೇತರಿಸಿಕೊಳ್ಳುತ್ತಿರುವದರಿಂದ ಪ್ರಮಾಣವಾಕ್ಯಗಳನ್ನು ನೀಡಿಲ್ಲ. ಇಷ್ಟಕ್ಕೇ ೪೦ ಪುಟಗಳು ದಾಟಿವೆ.

ಮುಂದೆ ವಿಸ್ತೃತ ಧರ್ಮೋದಕದ ಕುರಿತು ಬರೆಯುವ ಸಂದರ್ಭದಲ್ಲಿ ಪ್ರಮಾಣವಾಕ್ಯಗಳು ಚರ್ಚೆ ಎಲ್ಲವನ್ನೂ ಜಿಜ್ಞಾಸುಗಳಿಗೆ ನೀಡುತ್ತೇನೆ.

ಈ ಕ್ರಿಯೆಯನ್ನು ಮಾಡುವ  ಹೆಜ್ಜೆಹೆಜ್ಜೆಗೂ ವಿಷ್ಣುಸ್ಮರಣೆಯನ್ನು ಬಿಡಬೇಡಿ.

ನಾರಾಯಣ, ನಾರಾಯಣ ಎಂದು ಸ್ಮರಣೆ ಮಾಡುತ್ತಲೇ ಕಾರ್ಯವನ್ನು ಮಾಡಿ. ಅದು ನಿಶ್ಚಿತವಾಗಿ ಆ ಜೀವಕ್ಕೆ ತಲುಪುತ್ತದೆ.

ಶ್ರೀಹರಿ ವಾಯು ದೇವತಾ ಗುರುಗಳು ನಿಮ್ಮೆಲ್ಲರ ಮೇಲೆ ಪೂರ್ಣಾನುಗ್ರಹ ಮಾಡಲಿ, ನಿಮಗೆ ದೀರ್ಘಾಯುಷ್ಯ ದೃಢ ಆರೋಗ್ಯವನ್ನು ನೀಡಿ ಸಾಧನೆ ಮಾಡಿಸಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾಯ ಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾ ಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491